ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಮೊಬ - 9342018470

ಮಹಿಪತಿ
633. ಕೀರ್ತಿ ನಗರ
ವಿಜಯಪುರ 586109

8-5-2025

ಪ್ರಿಯ ಶ್ರೀ ಅನಂತರಾವ ದಂಡಿನ
ಅವರಿಗೆ

ನಿಮ್ಮ ಪುರಂದರದಾಸರ ವೆಬ-ಸೈಟನ್ನು ನೋಡಿ ಈ ಪತ್ರ ಬರೆಯುತ್ತಿದ್ದೇನೆ. ಎಂಥ ಅಪರೂಪದ ಕೆಲಸವನ್ನು ಮಾಡಿತ್ತಿದ್ದೀರಿ, ನಿಮಗೆ ಹೃತ್ಪೂರ್ವಕ ಅಭಿನಂದನೆಗಳು. ಪುರಂದರದಾಸರ ಕಾಲದಲ್ಲಿ ಅವರು ಓಣಿ-ಓಣಿಗಳಲ್ಲಿ ತಿರುಗಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತ, ಪ್ರತಿ ವ್ಯಕ್ತಿಗೆ ಭಗವಂತನಲ್ಲಿ ಭಕ್ತಿ ಹುಟ್ಟುವಂತೆ ಬದುಕಿನ ಮಹತ್ವವನ್ನು ಸಾರುತ್ತಿದ್ದರು. ಬದಲಾದ ಸನ್ನಿವೇಶದಲ್ಲಿ ಇಂದು ಹರಿದಾಸರಿದ್ದರೂ ಹಾಗೆ ತಿರುಗುವಂತಿಲ್ಲ. ತನ್ನಷ್ಟಕ್ಕೆ ತಾನೆ ಭಗವಂತನಲ್ಲಿ ಮೊರೆ ಇಟ್ಟು ಬರೆದ-ಬರೆಯುತ್ತಿರುವ ಅನೇಕ ಕೀರ್ತನೆಗಳು ದೊರೆಯುತ್ತವೆ. ಅವುಗಳನ್ನು ಯಾರಾದರೂ ಹಾಡಿದರೆ ಮಾತ್ರ ಕಿವಿಗೆ ಬೀಳುತ್ತವೆ.

ಇಂದಿನ ವಿದ್ಯುನ್ಮಾನದ ಅವಕಾಶವನ್ನು ಬಳಸಿ ನೀವು ಮಾಡುತ್ತಿರುವ ಕೆಲಸ ಒಂದು ರೀತಿಯಲ್ಲಿ ಪುರಂದರದಾಸರ ಅಂದಿನ ದಿನಗಳನ್ನೇ ನೆನಪಿಸುತ್ತವೆ. ವೃತ್ತಿಯಿಂದ ಅಭಿಯಂತರರಾಗಿ (ಇಂಜನೀಯರ) ಪ್ರವೃತ್ತಿಯನ್ನು ಭಗವಂತನ ನಾಮಸಂಕೀರ್ತನೆಯಲ್ಲಿ ತೊಡಗಿಸಿಕೊಂಡದ್ದು ಕನ್ನಡಕ್ಕೊಂದು ಅಪರೂಪದ ಕೊಡುಗೆಯಾಗಿದೆ. ಪುರಂದರದಾಸರ ಕೀರ್ತನೆಗಳ ಶುದ್ಧ ಪಾಠವನ್ನು, ಅವುಗಳ ಕಠಿಣ ಶಬ್ದಾರ್ಥಗಳೊಂದಿಗೆ, ಆಗಲೇ ಸುಶ್ರಾವ್ಯವಾಗಿ ಸಂಗೀತ ಪರಿಕರಗಳೊಂದಿಗೆ ಹಾಡಿದ ಕೀರ್ತನೆಗಳನ್ನು ವೆಬ್-ಸೈಟಿಗೆ ಹಾಕುತ್ತಿರುವ ಅದ್ಭುತ ಕೆಲಸವನ್ನು ಮಾಡುತ್ತಿರುವಿರಿ. ಯಾರು ಬೇಕಾದರೂ ಅವುಗಳನ್ನು ಬಳಸಿಕೊಳ್ಳಬಹುದು. ಇದು ಪುರಂದರದಾಸರ ಕೀರ್ತನೆಗಳಿಗಷ್ಟ ಸೀಮಿತವಾಗಬಾರದು ಎಲ್ಲ ಪ್ರಮುಖ ಹರಿದಾಸರ ಕೀರ್ತನೆಗಳನ್ನೂ ಈ ರೀತಿ ವೆಬ್ ಸೈಟಿಗೆ ಅಳವಡಿಸುವಂತಾಗಬೇಕು. ಒಬ್ಬರಿಂದ ಈ ಕೆಲಸ ಆಗುವುದು ಸಾಧ್ಯವಿಲ್ಲ. ಸಮಾನ ಮನಸ್ಕರ ಒಂದು ಶಿಷ್ಯಪರಂಪರೆ ನಿರ್ಮಿಸಿ ಅವರಿಂದ ಈ ಕೆಲಸವನ್ನು ಮುಂದುವರಿಸಿರಿ.

ನಿಮಗೆ ಎಲ್ಲ ತರದ ಶುಭಗಳಿರಲಿ ಎಂದು ಹಾರೈಸುವೆ.

ವಂದನಾಪೂರ್ವಕ,

(ಕೃಷ್ಣ ಕೊಲ್ಹಾರಕುಲಕರ್ಣಿ)